ತುಂಬಿತವರಿಗೆ. ಮೊಮ್ಮಕ್ಕಳಿಗೆ ಐದನೇ ವರ್ಷದ ಹುಟ್ಟುಹಬ್ಬದ ಉಡುಗೊರೆಯಾಗಿ ನಮ್ಮ ಅತ್ತೆ ಕೊಟ್ಟಿದ್ದ ನಾಲ್ಕು ಎಳೆಯ ಅವಲಕ್ಕಿಸರ ಮ್ಯಾಡಂ ಅದು. ಸುಮಾರು 42 ಗ್ರಾಂ ತೂಕವಿತ್ತು. ಮೊಮ್ಮಕ್ಕಳು ವಯಸ್ಸಿಗೆ ಬರುವವರೆಗೂ ತನ್ನ ಮಗಳು ಅದನ್ನು ಉಪಯೋಗಿಸಿ, ಅವರು ದೊಡ್ಡವರಾದಮೇಲೆ ಅದನ್ನು ಮುರಿಸಿ, ಅವರಿಗಿಷ್ಟವಾದ ಆಭರಣವನ್ನು ಮಾಡಿಸಿಕೊಡಬಹುದೆಂಬ ಉದ್ದೇಶದಿಂದ ಅವಲಕ್ಕಿಸರ ಮಾಡಿಸಿಕೊಟ್ಟಿದ್ದರು ನಮ್ಮ ಅತ್ತೆ. ಇಂದು ಮೈಸೂರಿನಲ್ಲಿ ನನ್ನ ಹೆಂಡತಿಯ ತಮ್ಮನ ಮದುವೆ ನಿಶ್ಚಿತಾರ್ಥದ ಕಾರ್ಯಕ್ರಮವಿತ್ತು. ಅಲ್ಲಿಯೇ ಮೊದಲಸಲ ಅದನ್ನು ಧರಿಸಬೇಕೆಂಬ ಅಭಿಲಾಷೆಯಿಂದ, ನನ್ನ ಹೆಂಡತಿ ಆ ಸರವನ್ನು ಹಾಗೆಯೇ ಇಟ್ಟಿದ್ದಳು. ಇಲ್ಲಿಯೇ ಹತ್ತಿರದಲ್ಲಿ, ನನ್ನ ಹೆಂಡತಿಯ ಅಕ್ಕನ ಮನೆಯಿದೆ. ಇವತ್ತು ಬೆಳಗ್ಗೆ, ನಮ್ಮ ಮನೆಯಿಂದ ಬೈಕಿನಲ್ಲಿ ಹೊರಟು, ನಿಮ್ಮ ಮನೆಯ ಹತ್ತಿರ ಇರುವ ಪಾರ್ಕಿನ ಎದುರುಗಡೆಯ ರಸ್ತೆಯ ಮುಖಾಂತರ ಇವಳ ಅಕ್ಕನ ಮನೆಗೆ ಹೋದೆವು. ಅಲ್ಲಿಂದ, ಅವರ ಕಾರಿನಲ್ಲಿ ಎಲ್ಲರೂ ಸೇರಿ ಮೈಸೂರಿಗೆ ನಿಶ್ಚಿತಾರ್ಥಕ್ಕೆಂದು ಬೆಳಗ್ಗೆ ಸುಮಾರು ಆರು ಗಂಟೆಗೆ ಹೊರಟೆವು. ಕಾರು ಮಂಡ್ಯದಬಳಿ ಇದ್ದಾಗ, ಇವಳ ಬ್ಯಾಗಿನಲ್ಲಿದ್ದ ನೀರಿನ ಬಾಟಲನ್ನು ತೆರೆಯಲು ಹೋದಾಗಲೇ ನಮಗೆ ಗೊತ್ತಾದದ್ದು, ಇವಳ ಬ್ಯಾಗು ತಳಭಾಗದಲ್ಲಿ ಹೊಲಿಗೆ ಬಿಚ್ಚಿ ಹರಿದುಹೋಗಿದೆ ಎಂದು! ಬ್ಯಾಗಿನಲ್ಲಿಟ್ಟಿದ್ದ ಅವಲಕ್ಕಿಸರ ಕಾಣದಾಗಿ, ಕಾರನ್ನು ನಿಲ್ಲಿಸಿ, ಕಾರಿನ ಮೂಲೆಮೂಲೆಯಲ್ಲೂ ಹುಡುಕಿದೆವು. ಎಲ್ಲೂ ಸಿಗಲಿಲ್ಲ. ಅವಳ ಅಕ್ಕನ ಮನೆಯಲ್ಲಿ ಬೈಕನ್ನು ನಿಲ್ಲಿಸಿದ ನಂತರ ನೇರವಾಗಿ ಬ್ಯಾಗನ್ನು ಕಾರಿನೊಳಗೆ ಇರಿಸಿದ್ದರಿಂದ, ಸರವು ಅವಳ ಅಕ್ಕನ ಮನೆಯೊಳಗೆ ಬಿದ್ದಿರುವ ಸಾಧ್ಯತೆಯೂ ಇಲ್ಲ. ಮಧ್ಯಾಹ್ನ ನಡೆಯಲಿದ್ದ ಇವಳ ತಮ್ಮನ ನಿಶ್ಚಿತಾರ್ಥವನ್ನು ತಪ್ಪಿಸಿಕೊಳ್ಳುವುದು ಸಾಧ್ಯವಿರದಿದ್ದುದರಿಂದ, ಒಲ್ಲದ ಮನಸ್ಸಿನಿಂದಲೇ ಮೈಸೂರನ್ನು ತಲುಪಿ, ನಿಶ್ಚಿತಾರ್ಥ ಮುಗಿದ ತಕ್ಷಣ ಮೈಸೂರಿನಿಂದ ಹೊರಟು, ಸಂಜೆ ಬೆಂಗಳೂರನ್ನು ತಲುಪಿದೆವು. ನಮ್ಮ ಮನೆಗೆ ಹೋಗಿ, ಮತ್ತೊಮ್ಮೆ ಎಲ್ಲಿಯಾದರೂ ಸರವು ಬ್ಯಾಗಿನ ತಳದಿಂದ ಉದುರಿ ಮನೆಯಲ್ಲಿಯೇ ಬಿದ್ದಿದೆಯೇನೋ ಎಂದು ವಿವರವಾಗಿ ಹುಡುಕಿ, ಮನೆಯಲ್ಲಿ ಎಲ್ಲೂ ಸಿಗದಿದ್ದಾಗ, ನಾವು ಇವಳ ಅಕ್ಕನ ಮನೆಗೆ ಹೋಗುವ ದಾರಿಯಲ್ಲಿ ಎಲ್ಲಾದರೂ ಬಿದ್ದಿರಬಹುದೇನೋ ಎಂಬ ಕೊನೆಯ ಕ್ಷೀಣ ಆಸೆ ಹೊತ್ತು, ಸರಕ್ಕಾಗಿ ಪಾರ್ಕಿನ ಹತ್ತಿರ ಹುಡುಕುತ್ತಿದ್ದೆವು. ನಾವು ಕಳೆದುಹೋದ ಚಿನ್ನದ ಸರವನ್ನು ಹುಡುಕುತ್ತಿದ್ದೇವೆ ಎಂದು ನಮ್ಮಿಂದ ಕೇಳಿ ತಿಳಿದ ಈ ಸಹೃದಯಿಗಳು ನಮ್ಮನ್ನು ಇಲ್ಲಿಗೆ ಕರೆತಂದರು...'' ಶ್ರೀನಿವಾಸ್ ಅವರನ್ನು ತೋರಿಸುತ್ತಾ ತಮ್ಮ ವೃತ್ತಾಂತವನ್ನು ಗಂಡ ಅರುಹಿದರು. ಮತ್ತು ನಿಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆಯೇ? ಎಂಬ ಪ್ರಶ್ನಾರ್ಥಕ ಭಾವದಲ್ಲಿ ನನ್ನ ಮತ್ತು ಮಾಲಾಳ ಮುಖ ನೋಡಿದರು.

ಬಹುಶಃ ಆ ಸರದ ನಿಜವಾದ ಮಾಲೀಕರು ಅವರೇ ಇರಬಹುದೆಂಬ ಅನುಮಾನ ನನ್ನಲ್ಲಿ ಬಲವಾಗತೊಡಗಿತು. ಆದರೆ ಈಗ ಏನೂ ಮಾಡುವಂತಿರಲಿಲ್ಲ. ಆಗಲೇ ಸರವು ಆಂಜನೇಯ ದೇವಸ್ಥಾನದ ಕಾಣಿಕೆ ಹುಂಡಿ ಸೇರಿಯಾಗಿತ್ತು.

``ನೀವು ಹೇಳುವ ಅವಲಕ್ಕಿಸರದ ವಿವರಣೆ, ಎಲ್ಲ ಅವಲಕ್ಕಿಸರಗಳಿಗೂ ಹೊದುವಂತಹದು. ನಾಲ್ಕು ಎಳೆಯ ಅವಲಕ್ಕಿಸರ ಸಾಮಾನ್ಯವಾಗಿ 40 ಗ್ರಾಂ ಆಸುಪಾಸಿನ ತೂಕದಲ್ಲಿರುತ್ತದೆ. ಒಂದು ವೇಳೆ ನನಗೆ ಸಿಕ್ಕ ವಸ್ತುವು ನಾಲ್ಕು ಎಳೆಯ ಅವಲಕ್ಕಿಸರ ಎಂದಾದರೂ, ಅದು ನಿಮ್ಮದೇ ಎಂದು ಸಾಬೀತುಪಡಿಸುವುದು ಹೇಗೆ?'' ನನ್ನ ಮನಸ್ಸಿನಲ್ಲಿದ್ದ ಗೊಂದಲವನ್ನು ತೇಲಿಬಿಟ್ಟೆ.